(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ಿಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಅಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಹೆಚ್. ಜೆ. ಭಾಭಾ,
ಎಜ್ಯುಕೇಷ್ನ ಸೆಕ್ರಟರಿ.

ಫಾರೆಸ್ಟ್ರಿ ಇಲಾಖೆ.

ನೋಟಿಫಿಕೇಷನ್.

ತಾರೀಖು 13ನೇ ಮೇ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ, ಕಡೂರು ಡಿಸ್ಟ್ರಿಕ್ಟು ಡಿಪೋಗಳ ಬಾಬತು ಚಾಬೀನೆ ಸಾಮಾನು, ಕಡೂರು ಡಿಸ್ಟ್ರಿಕ್ಟ ಫಾರೆಸ್ಟ್ರಿ ಆಫಿಸರ್ ಮತ್ತು ಡೆಪ್ಯೂಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರ್ರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಡಿಪೋ ಹೆಸರು	ಹರಾಜು ತಾರೀಖು	ಸಾಗವಾನಿ ನಾಟೂ	ಮನ್ನಾಜಾತಿ ನಾಟೂ	ಕಾಡುಜಾತಿ ನಾಟೂ	ಸಾಗವಾನಿ ಮನ್ನು ಕಾಡುಜಾತಿ ಬೆಲ್ಲಗಳು	ಸ್ಲೀಪರ್ ಬಿಡಿಸಿದ್ದು ತುಂಡುಗಳು	ಅವಿ ತುಂಡುಗಳು	ಸ್ಲೀಪರ್ ಬೆಲ್ಲಕೆ	ವಿಜಿರ್ಸ್ಟ್ರಿಣ ಸ್ಲೀಪರ್‌ಗಳು	ಸ್ಲೀಪರ್ ನಮೂನೆಯವರ್ ತುಂಡುಗಳು	ಪರಾ
									ಮಣ		
ಲಕ್ಕವಳ್ಳಿ	14 ಜೂ೯ 95	100	100	150	50	.	..	..	3000	..	ಸ್ವಲ್ಪ ಹೆಚ್ಚು ಕಡ್ಡಿ
							ಲಾಟ್				
ತರೀಕೆರೆ	17 ಡಿಟೋ	300	60	60	1000	450	50	..	..	..	
									*	*	
ಕಡೂರು	20 ಡಿಟೋ	50	50	50	500	..	..	..	400	7400	*ಬೀರೂರು ರೈಲ್ವೆಸ್ಟೇಷನ್ ಹತ್ತಿರವಿವೆ.

ಹರಾಜು ಪರತ್ ಸ್ ೯೫ 1895ನೇ ಇಸವಿ 15ನೇ ಮಾರ್ಚಿ ನಂಬರ 15229 ಆರ್. ಎಫ್. 155—92ನೇ ಗವರ್ನಮೆಂಟ್ ನೋಟಿಫಿಕೇಷನ್ ನೋಡಬೇಕು. ಇದು ಶಿವಮೊಗ್ಗ ಡಿಸ್ಟ್ರಿಕ್ಟು ಹರಾಜು ಇಸ್ತಿಹಾರ್ ಕೆಳಗೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಸೆಂಟ್ರಲ್ ಜೈಲ್.

ಇಸ್ತಿಹಾರ್‌ನಾಮೆ.

ತಾರೀಖು 2ನೇ ಮೇ ಸ್ ೯೫ 1895ನೇ ಇಸವಿ.

ಸ್ ೯೫ 1895ನೇ ಇಸವಿ ಜುಲೈ 1ರ ಲಾಗಾಯತು ಸ್ ೯೫ 1896ನೇ ಇಸವಿ ಜೂ೯ 30ರವರಿಗೆ, ಆ ಎರಡು ದಿವಸಗಳೂ ಕೀರಿ 12 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ, ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವುದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸ್ ೯೫ 1895ನೇ ಇಸವಿ ಜೂ೯ 10ನೇ ಸೋಮವಾರ ಹಗಲು 1 ಘಂಟೆಯವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ಿಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಫಾಯಿಷ್ ಮಾಡಿದೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್ಭಾಗದಲ್ಲಿ ಬರೆದಿರಬೇಕಾದ ಮೇಲ್ವಿಳಾಸವೇನಂದರೆ,

"I. ಕುರೀ ಮಾಂಸದ ಬರಬರಾಯಿ ದರಖಾಸ್ತು"

"II. ಸವದೇ ಸರಬರಾಯಿ ದರಖಾಸ್ತು"

4. ಕುರೀ ಮಾಂಸದ ಸರಬರಾಯಿಗೆ 75 ರೂಪಾಯಿ, ಸವದೇ ಸರಬರಾಯಿಗೆ 50 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಕರ್ನಸೀ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವುದಿಲ್ಲ.

5. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವ ದಕ್ಕೆ ಇಪ್ಪತ್ತುವೊಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫಿಸಿನಲ್ಲಿ ಬಿಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಬಂದು ರೂಪಾಯಿಗೆ ಇಪ್ಪತ್ತು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಸೂಪರ್‌ಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

I. ಮೊಳೆ ಇಲ್ಲದ ಮಾಂಸ—20,000 ಪೌಂಡು.

II. ಬಣಗಿದ ಸವದೆ—ಖೈದಿಗಳ ಕೈಲಿ ಕಡಿಸತಕ್ಕದ್ದು, ತುಂಡುಗಳ ಪ್ರಮಾಣ ಬಂದು ಮಳ ನುದ್ದವೂ $1\frac{1}{2}$ ಲಾಗಾಯತು 3 ಯಿಂಚು ಘಾತ್ರವಾಗಿಯೂ ಇರತಕ್ಕದ್ದು 400,000 ಪೌಂಡುಗಳು.

ಪದಾರ್ಥಗಳು ಮೇಲೆ ಕಂಡ ಪರಿಮಾಣದ ಮೇಲೆ ಇಪ್ಪತ್ತೈದ್ಕೇ ಆಗಬೇಕೆಂದು ಖಾತರೀಯಾವುದೂ ದೊರೆಯುವುದಿಲ್ಲ.

7. ಸೂಪರ್‌ಟೆಂಡೆಂಟರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ವುಳಸಿಕೊಂಡಿದಾರೆ.

8. ಯಾರ ದರಖಾಸ್ತನ್ನು ಮಂಜೂರ್‌ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್‌ಮಾಡಿದ ಶೇವಣೀ ಮೊಬಲಗು ಇಟ್ಟುಕೊಳ್ಳಲ್ಪಡುವುದು; ಮತ್ತು ಅವರ ದರಖಾಸ್ತು ಮಂಜೂರಾಗಿದೆ ಯಂದು ಅವರಿಗೆ ತಿಳಿಯಪಡಿಸಿದ ಬಂದು ವಾರದೊಳಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರೆದು ಕೊಡದೇ ಹೋದರೂ ಸರಿಯೆ, ಅಥವಾ ಕುರಿ ಮಾಂಸಕ್ಕೆ 150 ರೂಪಾಯಿ, ಸವದೆಗೆ 100 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಶೇವಣೀ ಮೊಬಲಗು ಸಿವಾಯಿ ಜಮೆಯಾಗಿ ತೆಗದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು ಪ್ರತಿ ತಿಂಗಳ ಗುರ್ತೇ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಸ್ಟೋರ್ ರೂಂ ಎಂಬ ಬಂದು ಉಗ್ರಾಣವನ್ನು ಸವದೆ ಇಜಾರೆದಾರರ ವಶಕ್ಕೆ ಕೊಡಲಾದೀತು; ಆತನು ಅದರಲ್ಲಿ ಸವುದೆಯನ್ನು ಇಟ್ಟುಕೊಳ್ಳತಕ್ಕದ್ದು, ಮತ್ತು ಅದರಲ್ಲಿ ಯಾವಾಗ್ಯೂ ಬಂದು ತಿಂಗಳಿಗೆ ಕಡವೆ ಇಲ್ಲದಂತೆ ಸರಬರಾಯನ್ನು ಇಟ್ಟಿರಬೇಕು. ಕುರೀ ಮಾಂಸವು ಪ್ರತಿ ದಿನವೂ ಬೆಳಿಗ್ಗೆ 8 ಘಂಟೆ ವಳಗಾಗಿ ಜೈಲ್‌ನಲ್ಲಿ ಸಿದ್ಧಪಡಿಸತಕ್ಕದ್ದು.

11. ಈ ಕಂಟ್ರಾಕ್ಟನ್ನು ಷಿಕ್ಕಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಷರತ್ತಿಗೆ ವಿನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು ಮುನಾಸಬು ಅರಿತು 50 ರೂಪಾಯಿಗೆ ಹೆಚ್ಚದೆ ಜರಿಮಾನೆಯನ್ನು ವಸೂಲು ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿ ಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಳಾಗಿ ತೆಗದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳೆಲ್ಲೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರ ಫೈಸಲೇ ಆಖೈರ್ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್‌ಟೆಂಡೆಂಟರ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರ್ ಜೈಲ್ ಇನ್‌ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಬಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

17. ಇಜಾರೆದಾರರು ತಪ್ಪಿ ಹೋಗುವುದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚುದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತೀಮಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

ಡಿ. ಎ. ಜೋಕ್ಸ್,
ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 6ನೇ ಮೇ ಸ್ಯ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದೊಡ್ಡಬಳ್ಳಾಪುರ ತಾಲ್ಲೂಕು ಈಸಬೇಲಿರುವ ಪುರಾತನವಾದ ಆದಿನಾರಾಯಣಸ್ವಾಮಿ ದೇವಸ್ಥಾನವು ಹೀನ ಸ್ಥಿತೀಲಿರುವದ್ದರಿಂದ ರಿಪೇರ್ ಆಗತಕ್ಕದ್ದು ಅವಶ್ಯಕವಾಗಿರುತ್ತೆ. 1874ನೇ ಇಸವಿ ಚೀಫ್ ಕಮ್ಮಿಷನರವರ ಪ್ರೊಕಿಡಿಂಗ್ಸ್ ಅನುಸರಿಸಿ ಗವರ್ಮೆಂಟಿನಿಂದ ಈ ರಿಪೇರಿಗಾಗಿ ತಗಲುವ ಲಾಗವಡಿನ ಅರ್ಧ ಭಾಗ ಕೊಡಲ್ಪಡುತ್ತೆ. ದೇವಸ್ಥಾನಗಳ ಮ್ಯಾನೇಜರ್‌ಗಳು ಮತ್ತು ಭಕ್ತಾದಿಗಳು ಕೇರಿ ಬಾಕೀ ಮೊಬಲಗು ಜಮಾಯಿಸಬೇಕಾಗಿರುವದ್ದರಿಂದ ಧರ್ಮಕರ್ತರು,